

ಸಂಕ್ರಾಂತಿ ಹಬ್ಬದಲ್ಲಿ ಬದಲಾಗುವುದು ಸೂರ್ಯ ಪಥ. ದಕ್ಷಿಣಾಯನದಿಂದ ಉತ್ತರಾಯಣ ಪುಣ್ಯಕಾಲಕ್ಕೆ ಅಡಿಯಿಡುವ ಈ ‘ಮಕರ ಸಂಕ್ರಮಣ’ ಪ್ರಕೃತಿಯ ಹಬ್ಬವೂ ಆಗಿದೆ. ವಸಂತ ಋತುವಿನ ಆಗಮನವನ್ನು ಸಾರುವ ಈ ಸಂದರ್ಭದಲ್ಲಿ ಮಾಮರ–ಕೋಗಿಲೆಗಳ ಇಂಚರ ಕೇಳುವ ಹೊತ್ತು, ಪ್ರಕೃತಿಯಲ್ಲಿ ಮಹತ್ತರ ಬದಲಾವಣೆಯಾಗುವ ಗಳಿಗೆ.

# ಸಂಕ್ರಾಂತಿ ಸಂಭ್ರಮ; ಪ್ರಕೃತಿ ಪ್ರೇಮ!




**■ ಉಮಾ ವೇಣೂರು**

ಬಂದಿತಿದೋ ಸಂಕ್ರಾಂತಿ  
ತಂದಿತಿದೋ ಸುಖ ಶಾಂತಿ  
ಹಸೆಯಿರಿಸಿ ಹರುಷಕ್ಕೆ  
ತುಳುಕಿಸುತ ನವಕಾಂತಿ  
ಸಂಕ್ರಾಂತಿ ನವಕಾಂತಿ

ಮಕರ ಸಂಕ್ರಮಣದ ಸಂಭ್ರಮವನ್ನು ಅನಾವರಣಗೊಳಿಸುವ ಈ ಹಾಡು ‘ಸುಗ್ಗಿ ಹಬ್ಬ’ದಲ್ಲಿ ಕೇಳಲು ಶ್ರವಣಾನಂದಕರವೂ ಆಗಿದೆ. ಸಂಕ್ರಾಂತಿ ಹಬ್ಬ ಎಂದರೆ ಪ್ರಕೃತಿಯ ಪರ್ವ. ಸಂಭ್ರಮವನ್ನು ಅನಾವರಣಗೊಳಿಸುವ ಈ ಹಬ್ಬದಂದು ರೈತರು ಬೆಳೆದ ಬೆಳೆಯನ್ನು ಪೂಜೆ ಮಾಡಿ ಹಬ್ಬದಡುಗೆ ಮಾಡಿ ಖುಷಿ ಪಡುತ್ತಾರೆ. ಸೂರ್ಯ ತನ್ನ ದಾರಿಯನ್ನು ಬದಲಿಸಿಕೊಳ್ಳುವ ‘ಮಕರ ಸಂಕ್ರಮಣ’ದ ಉತ್ತರಾಯಣ ಪುಣ್ಯಕಾಲಕ್ಕೆ ಅಡಿಯಿಡುವ ಇದು, ಎಳ್ಳು–ಬೆಲ್ಲದ ಹಬ್ಬವೂ ಹೌದು.

ಸೂರ್ಯ ಧನು ರಾಶಿಯಿಂದ ಮಕರ ರಾಶಿಗೆ ಸಂಚರಿಸುವ ಸಂದರ್ಭ. ವಸಂತ ಋತುವಿನ ಆಗಮನವನ್ನು ಸಾರುವ ಈ ಸಮಯದಲ್ಲಿ ಮಾಮರ–ಕೋಗಿಲೆಗಳ ಇಂಚರ ಕೇಳುವ ಹೊತ್ತು, ಪ್ರಕೃತಿಯಲ್ಲಿ ಮಹತ್ತರ ಬದಲಾವಣೆಯಾಗುವ ಗಳಿಗೆ. ಇವೆಲ್ಲವೂ ಪುಳಕ ಹಾಗೂ ರೋಮಾಂಚನಗೊಳಿಸುವ ಸಮಯವೂ ಆಗಿದೆ. ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಆಚರಿಸಲಾಗುವ ಒಂದು ವಿಶಿಷ್ಟ ಪ್ರಕೃತಿ ಹಬ್ಬವಿದು. ರೈತರು ತಾವು ಬೆಳೆದ ಬೆಳೆಯನ್ನು ತೆಗೆಯುವ ಸಂದರ್ಭದಲ್ಲಿ ಆಚರಿಸುವ ಹಬ್ಬ ಸಮೃದ್ಧಿಯ ಸಂಕೇತವೂ ಆಗಿದೆ. ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಈ ಹಬ್ಬದ ಆಚರಣೆ ಜೋರು. ಸಂಕ್ರಮಣದ ಸಂದರ್ಭ ಜಾನುವಾರುಗಳಿಗೆ ಕಿಚ್ಚು ಹಾಯಿಸಲಾಗುತ್ತದೆ, ಮನುಷ್ಯ ಮತ್ತು ಪ್ರಕೃತಿಯ ನಂಟನ್ನು ಮತ್ತೆ ನೆನಪಿಸುವ ಸಂದರ್ಭ ಇದು.

ಇಂದಿನ ಕಾಲಘಟ್ಟದಲ್ಲಿ ಎಲ್ಲಿ ನೋಡಿದರೂ ಕಷ್ಟ–ನಷ್ಟ, ಸಂಕಷ್ಟಗಳೇ ತುಂಬಿರುವಾಗ, ಎಲ್ಲರೂ ಬಯಸುವುದು ಸಂತೋಷ, ಸಮೃದ್ಧಿ, ಸಂಪತ್ತು. ಇವೆಲ್ಲ ಸಕಾರಾತ್ಮಕತೆಯ ಆಶಯಗಳೇ. ಇವೆಲ್ಲವನ್ನೂ ಮಕರ ಸಂಕ್ರಾಂತಿಯ ಸೂರ್ಯ ಹೊತ್ತು ತರುತ್ತಾನೆ ಎಂಬ ನಿರೀಕ್ಷೆಯೂ ಜನರದ್ದಾಗಿದೆ. ಈ ಬದಲಾವಣೆಯ ಗಳಿಗೆಯನ್ನು ‘ಪುಣ್ಯಕಾಲ’ ಎಂದು ಕರೆಯುವುದೂ ಇದೇ ಕಾರಣಕ್ಕಾಗಿ. ಈ ಹಬ್ಬ ಬದಲಾವಣೆಯ ಸಾನ್ನಿಧ್ಯವನ್ನು ವಹಿಸುತ್ತಾ, ಪ್ರಕೃತಿ, ಬದುಕು ಎರಡರಲ್ಲೂ ಹೊಸತನವನ್ನೇ ಮೂಡಿಸುತ್ತದೆ. ಮನುಷ್ಯ–ಮನುಷ್ಯರ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ನೆಲೆಯೂ ಅಡಗಿರುವುದು ಹಬ್ಬದ ಈ ಸುಸಂದರ್ಭದಲ್ಲೇ. ಜೊತೆಗೆ ಸಂಕ್ರಾಂತಿಯ ಗಳಿಗೆಯಲ್ಲಿ ಬದಲಾಗಬೇಕಾಗಿರುವುದು ಬಹಿರಂಗದ ನಡೆಯ ಪಥವಷ್ಟೇ ಅಲ್ಲ; ಅಂತರಂಗದ ನಡೆಯೂ ಬದಲಾಗಬೇಕಿದೆ ಎಂಬ ಸೂಚ್ಯ ವಿಚಾರವನ್ನೂ ಹಬ್ಬ ಅನಾವರಣಗೊಳಿಸುತ್ತದೆ.

ಎಳ್ಳು–ಬೆಲ್ಲವನ್ನು ಮನೆಯಲ್ಲಿ ತಯಾರಿಸಿ ಬಂಧು ಬಾಂಧವರಿಗೆ ಹಂಚಿಕೊಳ್ಳುವ ಸಂಭ್ರಮ, ಸಂಪ್ರದಾಯ ಎಲ್ಲೆಡೆಯೂ ಇದೆ.ನಮ್ಮ ರಾಜ್ಯದಲ್ಲಿ ಎಳ್ಳು ಬೆಲ್ಲದ ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು ಮತ್ತು ಕಬ್ಬಿನ ತುಂಡು, ಬಾಳೆಹಣ್ಣುಗಳನ್ನು ಬೀರುವುದು ರೂಢಿಯಲ್ಲಿದೆ. ಒಣಕೊಬ್ಬರಿಯನ್ನು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ, ತುಂಡು ಮಾಡಿದ ಬೆಲ್ಲದ ಜೊತೆಗೆ ಹುರಿಗಡಲೆ, ಶೇಂಗಾ ಬೀಜ, ಬಿಳಿ ಎಳ್ಳು ಸೇರಿಸಿ ಮಾಡಿರುವ ದ್ರವ್ಯದ ಘಮಲು ಮನೆಯಿಡೀ ಹರಡಿರುತ್ತದೆ. ಜೊತೆಗೆ ಮನೆಯಲ್ಲಿ ತಯಾರಿಸುವ ಸಿಹಿ ಪೊಂಗಲ್, ಖಾರ ಪೊಂಗಲ್‌ಗಳ ಪರಿಮಳ ಹದವಾಗಿ ಬೆರೆತು ಘಮ ಸೂಸುತ್ತಿರುತ್ತದೆ.

